# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 857 |
| 2 | ಮಾನ್ಯ ಸದಸ್ಯರ ಹೆಸರು | : | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು) |
| 3 | ಉತ್ತರಿಸಬೇಕಾದ ದಿನಾಂಕ | : | 19.08.2025 |
| 4 | ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು. |

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ರೈತರು ಬೆಳೆದ ಉತ್ಪನ್ನಗಳನ್ನು ಎ.ಪಿ.ಎಂಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಇರುವ ನಿಯಮಗಳೇನು; (ನಿಯಮಗಳ ಪ್ರತಿ ನೀಡುವುದು) | ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 8(2) ರಡಿ "ಮಾರುಕಟ್ಟೆ ಪ್ರಾಂಗಣ, ಮಾರುಕಟ್ಟೆ ಉಪ ಪ್ರಾಂಗಣ, ಉಪ ಮಾರುಕಟ್ಟೆ ಪ್ರಾಂಗಣ, ಖಾಸಗಿ ಮಾರುಕಟ್ಟೆ ಪ್ರಾಂಗಣ ಅಥವಾ ರೈತ-ಗ್ರಾಹಕ ಮಾರುಕಟ್ಟೆ ಪ್ರಾಂಗಣದ ಹೊರತಾಗಿ ಯಾವುದೇ ಸ್ಥಳವನ್ನು ಅಧಿಸೂಚಿತ ಕೃಷಿ ಉತ್ಪನ್ನಗಳ ಖರೀದಿಗಾಗಿ ಅಥವಾ ಮಾರಾಟಕ್ಕಾಗಿ ಉಪಯೋಗಿಸತಕ್ಕದ್ದಲ್ಲ" ಎಂದು ನಿರ್ದಿಷ್ಟಪಡಿಸಿದೆ.<br>**(ನಿಯಮಗಳ ಪ್ರತಿ ಲಗತ್ತಿಸಿದೆ)** |
| (ಆ) | ರೈತರು ಕೃಷಿ ಮಾರುಕಟ್ಟೆಗೆ ಪ್ರವೇಶಿಸಲು ಯಾವುದಾದರೂ ಶುಲ್ಕವಿದೆಯೇ ರಾಜ್ಯದ ರೈತರು ಬೆಳೆದ ಉತ್ಪನ್ನಗಳನ್ನು ಎ.ಪಿ.ಎಂ.ಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ರೈತರಿಂದ ದಲ್ಲಾಲಿಗಳು ಕಮಿಷನ್ ಪಡೆಯುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಸಹಕಾರ ನೀಡಿದ ಅಂತಹ ಅಧಿಕಾರಿಗಳು ಮತ್ತು ದಲ್ಲಾಲಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? | ರೈತರು ತಾವು ಬೆಳೆದ ಕೃಷಿ ಉತ್ಪನ್ನಗಳನ್ನು ರಾಜ್ಯದ ಅಥವಾ ರಾಷ್ಟ್ರದ ಯಾವುದೇ ಮಾರುಕಟ್ಟೆಗೆ ಕೊಂಡೊಯ್ಯಲು ಸ್ವತಂತ್ರರಿರುತ್ತಾರೆ ಹಾಗೂ ರೈತರು ಮಾರುಕಟ್ಟೆ ಪ್ರಾಂಗಣಗಳಿಗೆ ತಮ್ಮ ಉತ್ಪನ್ನಗಳನ್ನು ಮಾರಾಟಕ್ಕೆ ತಂದಾಗ ಯಾವುದೇ ರೀತಿಯ ಪ್ರವೇಶ ಶುಲ್ಕ ಇರುವುದಿಲ್ಲ.<br><br>ಮಾರುಕಟ್ಟೆ ಸಮಿತಿಗಳಿಂದ ಲೈಸೆನ್ಸ್ ಪಡೆದ ಕಮಿಷನ್ ಏಜೆಂಟರ್ ಮಾರುಕಟ್ಟೆ ಪ್ರಾಂಗಣಗಳಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಸದರಿಯವರ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಕಾಯ್ದೆಯಡಿ ನಿಗದಿಪಡಿಸಿದ್ದು, ಸದರಿಯವರ ಮುಖಾಂತರ ಮಾರಾಟವಾದ ಶೀಘ್ರ ಹಾಳಾಗುವ ಉತ್ಪನ್ನಗಳಿಗೆ ಶೇ.5 ರಂತೆ ಮತ್ತು ಆಹಾರ ಧಾನ್ಯಗಳು, ಇತ್ಯಾದಿಗಳಿಗೆ ಶೇ.2 ರಂತೆ ಉತ್ಪನ್ನಗಳ ಖರೀದಿದಾರರಿಂದ ಕಮೀಷನ್ ಪಡೆಯಲು ನಿಗದಿಪಡಿಸಿದೆ. ರೈತರು ಯಾವುದೇ ಕಮೀಷನ್ ಪಾವತಿ ಮಾಡಬೇಕಿರುವುದಿಲ್ಲ. |

| | | |
|---|---|---|
| | | ಕಮಿಷನ್ ನೀಡಬೇಕೆಂದು ಒತ್ತಾಯ ಮಾಡಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ದೂರು ನೀಡಿದಲ್ಲಿ ಮಾರುಕಟ್ಟೆ ಸಮಿತಿಗಳು ಸೂಕ್ತ ನಿಯಂತ್ರಣಾತ್ಮಕ ಕ್ರಮ ಕೈಗೊಳ್ಳುತ್ತವೆ.<br><br>ಸಹಕಾರ ನೀಡುವ ಅಧಿಕಾರಿಗಳ ಹಾಗೂ ದಲ್ಲಾಳಿಗಳ ವಿರುದ್ಧ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. |

**ಸಂಖ್ಯೆ: ಸಿಒ 192 ಎಂಆರ್‌ಇ 2025**

**(ಶಿವಾನಂದ ಎಸ್. ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ
ಕೃಷಿ ಮಾರುಕಟ್ಟೆ ಸಚಿವರು

ಉಪ ವಿಧಿಗಳನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ [1][ಕೃಷಿ ಮಾರುಕಟ್ಟೆ ನಿರ್ದೇಶಕ]ನು, ಮಾರುಕಟ್ಟೆ ಪ್ರದೇಶದಲ್ಲಿ ಅಧಿಸೂಚಿತ ಕೃಷಿ ಉತ್ಪನ್ನದ ಕ್ರಯವಿಕ್ರಯವನ್ನು ನಿಯಂತ್ರಿಸುವುದಕ್ಕಾಗಿ ಮಾರುಕಟ್ಟೆ ಸಮಿತಿಯು ವ್ಯವಸ್ಥೆ ಮಾಡಿದೆ ಎಂದು ಮನದಟ್ಟು ಮಾಡಿಕೊಂಡ ತರುವಾಯ, ಅಧಿಸೂಚನೆ ಮೂಲಕ ಆ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಮೂವತ್ತು ದಿನಗಳಿಗಿಂತ ಕಡಿಮೆಯಲ್ಲದ ಒಂದು ದಿನಾಂಕವನ್ನು ಮಾರುಕಟ್ಟೆ ಮತ್ತು ಉಪಮಾರುಕಟ್ಟೆ ಯಾವುದಾದರೂ ಇದ್ದರೆ, ಅದನ್ನು ಸ್ಥಾಪಿಸತಕ್ಕ ದಿನಾಂಕ 26 ಎಂಬುದಾಗಿ ಘೋಷಿಸತಕ್ಕದ್ದು. ಈ ಅಧಿನಿಯಮದ ಎಲ್ಲಾ ಉದ್ದೇಶಗಳಿಗಾಗಿ ಮಾರುಕಟ್ಟೆ ಮತ್ತು ಉಪ ಮಾರುಕಟ್ಟೆಗಳು, ಯುವುವಾದರೂ ಇದ್ದರೆ, ಅವುಗಳನ್ನು ಹಾಗೆ ಅಧಿಸೂಚಿಸಲಾದ ದಿನಾಂಕದಿಂದ ಜಾರಿಗೆ ಬರುವಂತೆ ಮಾರುಕಟ್ಟೆ ಪ್ರದೇಶಕ್ಕಾಗಿ ಸ್ಥಾಪಿಸಲಾಗಿದೆ ಎಂದು ಭಾವಿಸತಕ್ಕದ್ದು:

[2][ಪರಂತು, 6ನೇ ಪ್ರಕರಣದ (2-ಎ) ಉಪ-ಪ್ರಕರಣದ ಮೇರೆಗೆ ಅಧಿಸೂಚಿಸಲಾದ ಮಾರುಕಟ್ಟೆ ಅಥವಾ ಉಪ ಮಾರುಕಟ್ಟೆಯ ಸಂಬಂಧದಲ್ಲಿ, ಮಾರುಕಟ್ಟೆ ಅಥವಾ ಉಪ ಮಾರುಕಟ್ಟೆಯನ್ನು [3][ಕೃಷಿ ಮಾರುಕಟ್ಟೆ ನಿರ್ದೇಶಕ]ನು ಹೊರಡಿಸಿದ ಅಧಿಸೂಚನೆಯ ದಿನಾಂಕದಂದು ಸ್ಥಾಪಿಸಲಾಗಿದೆ ಎಂದು ಭಾವಿಸತಕ್ಕದ್ದು.]

**8. ಕೃಷಿ ಉತ್ಪನ್ನದ ಕ್ರಯ ವಿಕ್ರಯದ ನಿಯಂತ್ರಣ.**-(1) [4][ಮಾರುಕಟ್ಟೆ ಸ್ಥಾಪನೆಯ] ತರುವಾಯ,-

(ಎ) ಯಾವ ಸ್ಥಳೀಯ ಪ್ರಾಧಿಕಾರವೂ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಧಿಸೂಚಿಸಲಾದ ಯಾವುದೇ ಕೃಷಿ ಉತ್ಪನ್ನದ ಕ್ರಯ ವಿಕ್ರಯಕ್ಕಾಗಿ ಮಾರುಕಟ್ಟೆ ಪ್ರದೇಶದಲ್ಲಿ ಯಾವುದೇ ಸ್ಥಳವನ್ನು ಸ್ಥಾಪಿಸತಕ್ಕದ್ದಲ್ಲ, ಸ್ಥಾಪಿಸಲು ಅಧಿಕಾರ ನೀಡತಕ್ಕದ್ದಲ್ಲ ಅಥವಾ ಸ್ಥಾಪಿಸಿರುವಲ್ಲಿ ಮುಂದುವರಿಸತಕ್ಕದ್ದಲ್ಲ ಅಥವಾ ಸ್ಥಾಪಿಸುವುದಕ್ಕೆ, ಸ್ಥಾಪಿಸಲು ಅಧಿಕಾರ ನೀಡುವುದಕ್ಕೆ ಅಥವಾ ಸ್ಥಾಪಿಸಿರುವಲ್ಲಿ ಮುಂದುವರಿಸುವುದಕ್ಕೆ ಅನುಮತಿಸತಕ್ಕದ್ದಲ್ಲ:

ಪರಂತು, ಸ್ಥಳೀಯ ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳು ಮತ್ತು ನಿಯಮಗಳು ಮತ್ತು ಉಪವಿಧಿಗಳು ಮತ್ತು ಮಾರುಕಟ್ಟೆ ಸಮಿತಿಯ ಸ್ಥಾಯೀ ಆದೇಶಗಳಿಗೆ ಅನುಸಾರವಾಗಿ ಹೊರತು, ಅಂಥ ಸ್ಥಳದಲ್ಲಿ ಮಾರುಕಟ್ಟೆ ಕಾರ್ಯನಿರ್ವಾಹಕನು ವ್ಯವಹಾರ ನಡೆಸತಕ್ಕದ್ದಲ್ಲ ಎಂಬ ಷರತ್ತುಗಳಿಗೊಳಪಟ್ಟು [5][ದನಕರು, ಕುರಿ, ಮತ್ತು ಆಡುಗಳ ಹೊರತಾಗಿ] ಯಾವುದೇ ಅಧಿಸೂಚಿತ ಕೃಷಿ ಉತ್ಪನ್ನದ ಚಿಲ್ಲರೆ ಮಾರಾಟಕ್ಕಾಗಿ ಯಾವುದೇ ಸ್ಥಳವನ್ನು ಸ್ಥಾಪಿಸಬಹುದು ಅಥವಾ ಮುಂದುವರಿಸಬಹುದು;

(ಬಿ) ಈ ಸಂಬಂಧದಲ್ಲಿ ಮಾರುಕಟ್ಟೆ ಸಮಿತಿಯು ಮಂಜೂರು ಮಾಡಿದ ಲೈಸೆನ್ಸಿನ ಹೊರತು ಅಥವಾ ಅನ್ಯಥಾ ಅಂಥ ಲೈಸನ್ಸಿನ ನಿಬಂಧನೆಗಳ ಮತ್ತು ಷರತ್ತುಗಳ ಅನುಸಾರವಾಗಿ ಹೊರತು ಯಾವನೇ ವ್ಯಕ್ತಿಯು,-

(i) ಅಧಿಸೂಚಿತ ಕೃಷಿ ಉತ್ಪನ್ನದ ಕ್ರಯವಿಕ್ರಯಕ್ಕಾಗಿ ಮಾರುಕಟ್ಟೆ ಪ್ರದೇಶದಲ್ಲಿನ ಯಾವುದೇ ಸ್ಥಳವನ್ನು ಉಪಯೋಗಿಸತಕ್ಕದ್ದಲ್ಲ; ಅಥವಾ

(ii) ಅಧಿಸೂಚಿತ ಕೃಷಿ ಉತ್ಪನ್ನದ ಕ್ರಯವಿಕ್ರಯಕ್ಕೆ ಸಂಬಂಧಿಸಿದಂತೆ ಒಬ್ಬ ವ್ಯಾಪಾರಿ, ಕಮಿಷನ್ ಏಜೆಂಟ್, ದಲ್ಲಾಳಿ, ಸಂಸ್ಕರಣಕಾರ, ತೂಕ ಮಾಡುವವ, ಉಗ್ರಾಣಪಾಲಕ ಎಂಬುವನಾಗಿ ಅಥವಾ ಯಾವುದೇ ಅಧಿಕಾರ ಸಾಮರ್ಥ್ಯದಲ್ಲಿ

---

1 1986ರ ಅಧಿನಿಯಮ ಸಂಖ್ಯೆ 35ರ ಮೂಲಕ ದಿನಾಂಕ 17-6-1986ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2 1969ರ ಅಧಿನಿಯಮ ಸಂಖ್ಯೆ 19ರ ಮೂಲಕ ದಿನಾಂಕ 1-5-1968ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

3 1986ರ ಅಧಿನಿಯಮ ಸಂಖ್ಯೆ 35ರ ಮೂಲಕ ದಿನಾಂಕ 17-6-1986ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

4 1969ರ ಅಧಿನಿಯಮ ಸಂಖ್ಯೆ 19ರ ಮೂಲಕ ದಿನಾಂಕ 1-5-1968ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

5 1980ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ 30-6-1979ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಮಾರುಕಟ್ಟೆ ಪ್ರದೇಶದಲ್ಲಿ ಅಥವಾ ಅದರಲ್ಲಿರುವ ಯಾವುದೇ ಮಾರುಕಟ್ಟೆಯಲ್ಲಿ ವ್ಯವಹರಿಸತಕ್ಕದ್ದಲ್ಲ:

ಪರಂತು (ಬಿ) ಖಂಡದಲ್ಲಿರುವುದಾವುದೂ,-

(i) ಅಂಥ ಉತ್ಪನ್ನದ ಉತ್ಪಾದಕನು ತಾನೇ ಮಾರಾಟಗಾರನಾಗಿದ್ದಲ್ಲಿ ಅಂಥ ಕೃಷಿ ಉತ್ಪನ್ನದ ಮಾರಾಟಕ್ಕೆ; ಅಥವಾ

[1][(ii) ಅಂಥ ಉತ್ಪನ್ನದ ಖರೀದಿದಾರನು ತನ್ನ ಗೃಹಬಳಕೆಗಾಗಿ ಅಂಥ ಉತ್ಪನ್ನವನ್ನು ಖರೀದಿಸುವ ವ್ಯಕ್ತಿಯಾಗಿದ್ದಲ್ಲಿ, ಅಂಥ ಕೃಷಿ ಉತ್ಪನ್ನದ ಮಾರಾಟಕ್ಕೆ]

- ಅನ್ವಯವಾಗತಕ್ಕದ್ದಲ್ಲ.

[2][(2) ಸಂದರ್ಭಾನುಸಾರ ಮಾರುಕಟ್ಟೆ ಪ್ರಾಂಗಣದ, ಮಾರುಕಟ್ಟೆ ಉಪಪ್ರಾಂಗಣದ, [3][ಉಪ ಮಾರುಕಟ್ಟೆ ಪ್ರಾಂಗಣದ, ಖಾಸಗಿ ಮಾರುಕಟ್ಟೆ ಪ್ರಾಂಗಣದ ಅಥವಾ ರೈತ-ಗ್ರಾಹಕ ಮಾರುಕಟ್ಟೆ ಪ್ರಾಂಗಣದ] ಹೊರತಾಗಿ ಯಾವುದೇ ಸ್ಥಳವನ್ನು ಅಧಿಸೂಚಿತ ಕೃಷಿ ಉತ್ಪನ್ನಗಳ ಖರೀದಿಗಾಗಿ ಅಥವಾ ಮಾರಾಟಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

(3) (2)ನೇ ಉಪ-ಪ್ರಕರಣದಲ್ಲಿರುವ ಯಾವುದೂ,-

(ಎ) ಅಧಿಸೂಚಿತ ಕೃಷಿ ಉತ್ಪನ್ನಗಳನ್ನು,-

(i) ಒಂದು ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಕ್ರಯ ವಿಕ್ರಯ ಸಂಘ;

(ii) ಒಂದು ಪ್ರಾಥಮಿಕ ಕೃಷಿ ಸಹಕಾರ ಪತ್ತಿನ ಸಂಘ; ಮತ್ತು

(iii) ರಾಜ್ಯ ಸರ್ಕಾರದ ಅನುಮತಿ ಪಡೆದ ಇತರ ಯಾವುದೇ ಸಹಕಾರ ಸಂಘ - ಇವುಗಳ ಮೂಲಕ ಖರೀದಿ ಅಥವಾ ಮಾರಾಟ ಮಾಡುವುದಕ್ಕೆ;

(ಬಿ) ಒಬ್ಬ ಚಿಲ್ಲರೆ ವ್ಯಾಪಾರಿಯು ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ

- ಅನ್ವಯವಾಗತಕ್ಕದ್ದಲ್ಲ.]

[4][(ಸಿ) ಕರಾರು ವ್ಯವಸಾಯದ ಒಪ್ಪಂದದ ಮೇರೆಗೆ ಕರಾರು ವ್ಯವಸಾಯ ಉತ್ಪಾದಕನು ಕರಾರು ವ್ಯವಸಾಯ ಪ್ರಾಯೋಜಕನಿಗೆ ಮಾರಾಟ ಮಾಡುವುದಕ್ಕೆ;

(ಡಿ) ಕೃಷಿಕನಿಂದ 72-ಎ ಪ್ರಕರಣದ ಮೇರೆಗೆ ಲೈಸೆನ್ಸುದಾರನು ಅಧಿಸೂಚಿತ ಕೃಷಿ ಉತ್ಪನ್ನವನ್ನು ನೇರವಾಗಿ ಖರೀದಿ ಮಾಡಿರುವುದಕ್ಕೆ].

## ಅಧ್ಯಾಯ III
## ಮಾರುಕಟ್ಟೆ ಸಮಿತಿಗಳ ರಚನೆ

**9. ಮಾರುಕಟ್ಟೆ ಸಮಿತಿಯ ಸ್ಥಾಪನೆ ಮತ್ತು ಅದರ ನಿಗಮನ.**-(1) IXನೇ ಅಧ್ಯಾಯದಲ್ಲಿ ಉಪಬಂಧಿಸಿರುವುದನ್ನುಳಿದು ಪ್ರತಿಯೊಂದು ಮಾರುಕಟ್ಟೆ ಪ್ರದೇಶಕ್ಕಾಗಿ ಸಮಗ್ರ ಮಾರುಕಟ್ಟೆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಒಂದು ಮಾರುಕಟ್ಟೆ ಸಮಿತಿಯು ಇರತಕ್ಕದ್ದು.

1 1976ರ ಅಧಿನಿಯಮ ಸಂಖ್ಯೆ 43ರ ಮೂಲಕ ದಿನಾಂಕ 29-5-1976ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2 1987ರ ಅಧಿನಿಯಮ ಸಂಖ್ಯೆ 29ರ ಮೂಲಕ ದಿನಾಂಕ 10-8-1987ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3 2007ರ ಅಧಿನಿಯಮ ಸಂಖ್ಯೆ 23ರ ಮೂಲಕ "ಉಪ-ಮಾರುಕಟ್ಟೆ ಪ್ರಾಂಗಣದ" ಎಂಬ ಪದಗಳ ಬದಲಾಗಿ ದಿನಾಂಕ 16-08-2007ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

4 2007ರ ಅಧಿನಿಯಮ ಸಂಖ್ಯೆ 23ರ ಮೂಲಕ (ಸಿ) ಮತ್ತು (ಡಿ) ಖಂಡಗಳನ್ನು ದಿನಾಂಕ 16-08-2007ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಉಪ ವಿಧಿಗಳನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ [1][ಕೃಷಿ ಮಾರುಕಟ್ಟೆ ನಿರ್ದೇಶಕ]ನು, ಮಾರುಕಟ್ಟೆ ಪ್ರದೇಶದಲ್ಲಿ ಅಧಿಸೂಚಿತ ಕೃಷಿ ಉತ್ಪನ್ನದ ಕ್ರಯವಿಕ್ರಯವನ್ನು ನಿಯಂತ್ರಿಸುವುದಕ್ಕಾಗಿ ಮಾರುಕಟ್ಟೆ ಸಮಿತಿಯು ವ್ಯವಸ್ಥೆ ಮಾಡಿದೆ ಎಂದು ಮನದಟ್ಟು ಮಾಡಿಕೊಂಡ ತರುವಾಯ, ಅಧಿಸೂಚನೆ ಮೂಲಕ ಆ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಮೂವತ್ತು ದಿನಗಳಿಗಿಂತ ಕಡಿಮೆಯಲ್ಲದ ಒಂದು ದಿನಾಂಕವನ್ನು ಮಾರುಕಟ್ಟೆ ಮತ್ತು ಉಪಮಾರುಕಟ್ಟೆ ಯಾವುದಾದರೂ ಇದ್ದರೆ, ಅದನ್ನು ಸ್ಥಾಪಿಸತಕ್ಕ ದಿನಾಂಕ 26 ಎಂಬುದಾಗಿ ಘೋಷಿಸತಕ್ಕದ್ದು. ಈ ಅಧಿನಿಯಮದ ಎಲ್ಲಾ ಉದ್ದೇಶಗಳಿಗಾಗಿ ಮಾರುಕಟ್ಟೆ ಮತ್ತು ಉಪ ಮಾರುಕಟ್ಟೆಗಳು, ಯುವುವಾದರೂ ಇದ್ದರೆ, ಅವುಗಳನ್ನು ಹಾಗೆ ಅಧಿಸೂಚಿಸಲಾದ ದಿನಾಂಕದಿಂದ ಜಾರಿಗೆ ಬರುವಂತೆ ಮಾರುಕಟ್ಟೆ ಪ್ರದೇಶಕ್ಕಾಗಿ ಸ್ಥಾಪಿಸಲಾಗಿದೆ ಎಂದು ಭಾವಿಸತಕ್ಕದ್ದು:

[2][ಪರಂತು, 6ನೇ ಪ್ರಕರಣದ (2-ಎ) ಉಪ-ಪ್ರಕರಣದ ಮೇರೆಗೆ ಅಧಿಸೂಚಿಸಲಾದ ಮಾರುಕಟ್ಟೆ ಅಥವಾ ಉಪ ಮಾರುಕಟ್ಟೆಯ ಸಂಬಂಧದಲ್ಲಿ, ಮಾರುಕಟ್ಟೆ ಅಥವಾ ಉಪ ಮಾರುಕಟ್ಟೆಯನ್ನು [3][ಕೃಷಿ ಮಾರುಕಟ್ಟೆ ನಿರ್ದೇಶಕ]ನು ಹೊರಡಿಸಿದ ಅಧಿಸೂಚನೆಯ ದಿನಾಂಕದಂದು ಸ್ಥಾಪಿಸಲಾಗಿದೆ ಎಂದು ಭಾವಿಸತಕ್ಕದ್ದು.]

**8. ಕೃಷಿ ಉತ್ಪನ್ನದ ಕ್ರಯ ವಿಕ್ರಯದ ನಿಯಂತ್ರಣ.**-(1) [4][ಮಾರುಕಟ್ಟೆ ಸ್ಥಾಪನೆಯ] ತರುವಾಯ,-

(ಎ) ಯಾವ ಸ್ಥಳೀಯ ಪ್ರಾಧಿಕಾರವೂ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಧಿಸೂಚಿಸಲಾದ ಯಾವುದೇ ಕೃಷಿ ಉತ್ಪನ್ನದ ಕ್ರಯ ವಿಕ್ರಯಕ್ಕಾಗಿ ಮಾರುಕಟ್ಟೆ ಪ್ರದೇಶದಲ್ಲಿ ಯಾವುದೇ ಸ್ಥಳವನ್ನು ಸ್ಥಾಪಿಸತಕ್ಕದ್ದಲ್ಲ, ಸ್ಥಾಪಿಸಲು ಅಧಿಕಾರ ನೀಡತಕ್ಕದ್ದಲ್ಲ ಅಥವಾ ಸ್ಥಾಪಿಸಿರುವಲ್ಲಿ ಮುಂದುವರಿಸತಕ್ಕದ್ದಲ್ಲ ಅಥವಾ ಸ್ಥಾಪಿಸುವುದಕ್ಕೆ, ಸ್ಥಾಪಿಸಲು ಅಧಿಕಾರ ನೀಡುವುದಕ್ಕೆ ಅಥವಾ ಸ್ಥಾಪಿಸಿರುವಲ್ಲಿ ಮುಂದುವರಿಸುವುದಕ್ಕೆ ಅನುಮತಿಸತಕ್ಕದ್ದಲ್ಲ:

ಪರಂತು, ಸ್ಥಳೀಯ ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳು ಮತ್ತು ನಿಯಮಗಳು ಮತ್ತು ಉಪವಿಧಿಗಳು ಮತ್ತು ಮಾರುಕಟ್ಟೆ ಸಮಿತಿಯ ಸ್ಥಾಯೀ ಆದೇಶಗಳಿಗೆ ಅನುಸಾರವಾಗಿ ಹೊರತು, ಅಂಥ ಸ್ಥಳದಲ್ಲಿ ಮಾರುಕಟ್ಟೆ ಕಾರ್ಯನಿರ್ವಾಹಕನು ವ್ಯವಹಾರ ನಡೆಸತಕ್ಕದ್ದಲ್ಲ ಎಂಬ ಷರತ್ತುಗಳಿಗೊಳಪಟ್ಟು [5][ದನಕರು, ಕುರಿ, ಮತ್ತು ಆಡುಗಳ ಹೊರತಾಗಿ] ಯಾವುದೇ ಅಧಿಸೂಚಿತ ಕೃಷಿ ಉತ್ಪನ್ನದ ಚಿಲ್ಲರೆ ಮಾರಾಟಕ್ಕಾಗಿ ಯಾವುದೇ ಸ್ಥಳವನ್ನು ಸ್ಥಾಪಿಸಬಹುದು ಅಥವಾ ಮುಂದುವರಿಸಬಹುದು;

(ಬಿ) ಈ ಸಂಬಂಧದಲ್ಲಿ ಮಾರುಕಟ್ಟೆ ಸಮಿತಿಯು ಮಂಜೂರು ಮಾಡಿದ ಲೈಸೆನ್ಸಿನ ಹೊರತು ಅಥವಾ ಅನ್ಯಥಾ ಅಂಥ ಲೈಸನ್ಸಿನ ನಿಬಂಧನೆಗಳ ಮತ್ತು ಷರತ್ತುಗಳ ಅನುಸಾರವಾಗಿ ಹೊರತು ಯಾವನೇ ವ್ಯಕ್ತಿಯು,-

(i) ಅಧಿಸೂಚಿತ ಕೃಷಿ ಉತ್ಪನ್ನದ ಕ್ರಯವಿಕ್ರಯಕ್ಕಾಗಿ ಮಾರುಕಟ್ಟೆ ಪ್ರದೇಶದಲ್ಲಿನ ಯಾವುದೇ ಸ್ಥಳವನ್ನು ಉಪಯೋಗಿಸತಕ್ಕದ್ದಲ್ಲ; ಅಥವಾ

(ii) ಅಧಿಸೂಚಿತ ಕೃಷಿ ಉತ್ಪನ್ನದ ಕ್ರಯವಿಕ್ರಯಕ್ಕೆ ಸಂಬಂಧಿಸಿದಂತೆ ಒಬ್ಬ ವ್ಯಾಪಾರಿ, ಕಮಿಷನ್ ಏಜೆಂಟ್, ದಲ್ಲಾಳಿ, ಸಂಸ್ಕರಣಕಾರ, ತೂಕ ಮಾಡುವವ, ಉಗ್ರಾಣಪಾಲಕ ಎಂಬುವನಾಗಿ ಅಥವಾ ಯಾವುದೇ ಅಧಿಕಾರ ಸಾಮರ್ಥ್ಯದಲ್ಲಿ

1 1986ರ ಅಧಿನಿಯಮ ಸಂಖ್ಯೆ 35ರ ಮೂಲಕ ದಿನಾಂಕ 17-6-1986ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2 1969ರ ಅಧಿನಿಯಮ ಸಂಖ್ಯೆ 19ರ ಮೂಲಕ ದಿನಾಂಕ 1-5-1968ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3 1986ರ ಅಧಿನಿಯಮ ಸಂಖ್ಯೆ 35ರ ಮೂಲಕ ದಿನಾಂಕ 17-6-1986ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4 1969ರ ಅಧಿನಿಯಮ ಸಂಖ್ಯೆ 19ರ ಮೂಲಕ ದಿನಾಂಕ 1-5-1968ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5 1980ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ 30-6-1979ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಮಾರುಕಟ್ಟೆ ಪ್ರದೇಶದಲ್ಲಿ ಅಥವಾ ಅದರಲ್ಲಿರುವ ಯಾವುದೇ ಮಾರುಕಟ್ಟೆಯಲ್ಲಿ ವ್ಯವಹರಿಸತಕ್ಕದ್ದಲ್ಲ:

ಪರಂತು (ಬಿ) ಖಂಡದಲ್ಲಿರುವುದಾವುದೂ,-

(i) ಅಂಥ ಉತ್ಪನ್ನದ ಉತ್ಪಾದಕನು ತಾನೇ ಮಾರಾಟಗಾರನಾಗಿದ್ದಲ್ಲಿ ಅಂಥ ಕೃಷಿ ಉತ್ಪನ್ನದ ಮಾರಾಟಕ್ಕೆ; ಅಥವಾ

[1][(ii) ಅಂಥ ಉತ್ಪನ್ನದ ಖರೀದಿದಾರನು ತನ್ನ ಗೃಹಬಳಕೆಗಾಗಿ ಅಂಥ ಉತ್ಪನ್ನವನ್ನು ಖರೀದಿಸುವ ವ್ಯಕ್ತಿಯಾಗಿದ್ದಲ್ಲಿ, ಅಂಥ ಕೃಷಿ ಉತ್ಪನ್ನದ ಮಾರಾಟಕ್ಕೆ]

- ಅನ್ವಯವಾಗತಕ್ಕದ್ದಲ್ಲ.

[2][(2) ಸಂದರ್ಭಾನುಸಾರ ಮಾರುಕಟ್ಟೆ ಪ್ರಾಂಗಣದ, ಮಾರುಕಟ್ಟೆ ಉಪಪ್ರಾಂಗಣದ, [3][ಉಪ ಮಾರುಕಟ್ಟೆ ಪ್ರಾಂಗಣದ, ಖಾಸಗಿ ಮಾರುಕಟ್ಟೆ ಪ್ರಾಂಗಣದ ಅಥವಾ ರೈತ-ಗ್ರಾಹಕ ಮಾರುಕಟ್ಟೆ ಪ್ರಾಂಗಣದ] ಹೊರತಾಗಿ ಯಾವುದೇ ಸ್ಥಳವನ್ನು ಅಧಿಸೂಚಿತ ಕೃಷಿ ಉತ್ಪನ್ನಗಳ ಖರೀದಿಗಾಗಿ ಅಥವಾ ಮಾರಾಟಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

(3) (2)ನೇ ಉಪ-ಪ್ರಕರಣದಲ್ಲಿರುವ ಯಾವುದೂ,-

(ಎ) ಅಧಿಸೂಚಿತ ಕೃಷಿ ಉತ್ಪನ್ನಗಳನ್ನು,-

(i) ಒಂದು ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಕ್ರಯ ವಿಕ್ರಯ ಸಂಘ;

(ii) ಒಂದು ಪ್ರಾಥಮಿಕ ಕೃಷಿ ಸಹಕಾರ ಪತ್ತಿನ ಸಂಘ; ಮತ್ತು

(iii) ರಾಜ್ಯ ಸರ್ಕಾರದ ಅನುಮತಿ ಪಡೆದ ಇತರ ಯಾವುದೇ ಸಹಕಾರ ಸಂಘ - ಇವುಗಳ ಮೂಲಕ ಖರೀದಿ ಅಥವಾ ಮಾರಾಟ ಮಾಡುವುದಕ್ಕೆ;

(ಬಿ) ಒಬ್ಬ ಚಿಲ್ಲರೆ ವ್ಯಾಪಾರಿಯು ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ

- ಅನ್ವಯವಾಗತಕ್ಕದ್ದಲ್ಲ.]

[4][(ಸಿ) ಕರಾರು ವ್ಯವಸಾಯದ ಒಪ್ಪಂದದ ಮೇರೆಗೆ ಕರಾರು ವ್ಯವಸಾಯ ಉತ್ಪಾದಕನು ಕರಾರು ವ್ಯವಸಾಯ ಪ್ರಾಯೋಜಕನಿಗೆ ಮಾರಾಟ ಮಾಡುವುದಕ್ಕೆ;

(ಡಿ) ಕೃಷಿಕನಿಂದ 72-ಎ ಪ್ರಕರಣದ ಮೇರೆಗೆ ಲೈಸೆನ್ಸುದಾರನು ಅಧಿಸೂಚಿತ ಕೃಷಿ ಉತ್ಪನ್ನವನ್ನು ನೇರವಾಗಿ ಖರೀದಿ ಮಾಡಿರುವುದಕ್ಕೆ].

## ಅಧ್ಯಾಯ III
## ಮಾರುಕಟ್ಟೆ ಸಮಿತಿಗಳ ರಚನೆ

9. **ಮಾರುಕಟ್ಟೆ ಸಮಿತಿಯ ಸ್ಥಾಪನೆ ಮತ್ತು ಅದರ ನಿಗಮನ.**-(1) IXನೇ ಅಧ್ಯಾಯದಲ್ಲಿ ಉಪಬಂಧಿಸಿರುವುದನ್ನುಳಿದು ಪ್ರತಿಯೊಂದು ಮಾರುಕಟ್ಟೆ ಪ್ರದೇಶಕ್ಕಾಗಿ ಸಮಗ್ರ ಮಾರುಕಟ್ಟೆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಒಂದು ಮಾರುಕಟ್ಟೆ ಸಮಿತಿಯು ಇರತಕ್ಕದ್ದು.

1 1976ರ ಅಧಿನಿಯಮ ಸಂಖ್ಯೆ 43ರ ಮೂಲಕ ದಿನಾಂಕ 29-5-1976ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2 1987ರ ಅಧಿನಿಯಮ ಸಂಖ್ಯೆ 29ರ ಮೂಲಕ ದಿನಾಂಕ 10-8-1987ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3 2007ರ ಅಧಿನಿಯಮ ಸಂಖ್ಯೆ 23ರ ಮೂಲಕ "ಉಪ-ಮಾರುಕಟ್ಟೆ ಪ್ರಾಂಗಣದ" ಎಂಬ ಪದಗಳ ಬದಲಾಗಿ ದಿನಾಂಕ 16-08-2007ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

4 2007ರ ಅಧಿನಿಯಮ ಸಂಖ್ಯೆ 23ರ ಮೂಲಕ (ಸಿ) ಮತ್ತು (ಡಿ) ಖಂಡಗಳನ್ನು ದಿನಾಂಕ 16-08-2007ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.